ನಷ್ಟ ಅನುಭವಿಸುತ್ತಾ ಬಂದಿದೆ. ಕಾರ್ಖಾನೆಯ ಪುನಶ್ಚೇತನವು ತನ್ನ ಕಾರ್ಯವ್ಯಾಪ್ತಿಯಲ್ಲಿ ಹೆಚ್ಚಿನ ಕಬ್ಬು ಬೆಳೆಸುವುದನ್ನು ಅವಲಂಬಿಸಿರುತ್ತದೆ. ಈ ಬಗ್ಗೆ ಕಾರ್ಖಾನೆಯೇ ಸೂಕ್ತ ಯೋಜನೆ ರೂಪಿಸಿಕೊಳ್ಳಬೇಕಾಗಿದ್ದು, ಸರ್ಕಾರ ಯಾವುದೇ ಪುನಶ್ಚೇತನ ಕಾರ್ಯಕ್ರಮ ಹಾಕಿಕೊಂಡಿರುವುದಿಲ್ಲ.

ರಾಜ್ಯದಲ್ಲಿ ಪಶುವೈದ್ಯರ ನೇಮಕಾತಿ

639(1148) ಶ್ರೀ ಸಭಾಪತಿ ಯು.ಆರ್ (ಉಡುಪಿ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆ ಹಾಗೂ ಕೇಂದ್ರಗಳಲ್ಲಿರುವ ಖಾಲಿಯಿರುವ ಹುದ್ದೆಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಟ್ಟು 4043 ಹುದ್ದೆಗಳು ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಿದೆ.

ಆ) ಆರ್ಥಿಕ ಮಿತವ್ಯಯದ ಆದೇಶಕ್ಕೊಳಪಟ್ಟು ಈ ಹುದ್ದೆಗಳನ್ನು ಬಿಡ್ತಿ ಹಾಗೂ ನೇಮಕಾತಿ ಮೂಲಕ ತುಂಬಲಾಗುವುದು.

ಅನುಬಂಧ

ಚುಕ್ಕೆ ಗುರುತಿಲ್ಲದ ಸಂಖ್ಯೆ 1148 ಶ್ರೀ ಸಭಾಪತಿ ಯು.ಆರ್.

ಕ್ರ.ಸಂ.	ಜಿಲ್ಲೆಗಳು	ಖಾಲಿ ಹುದ್ದೆಗಳ ಸಂಖ್ಯೆ
1.	ಬೆಂಗಳೂರು ನಗರ	210
2.	ಬೆಂಗಳೂರು ಗ್ರಾಮಾಂತರ	170
3.	ತುಮಕೂರು	186
4.	ಕೋಲಾರ	176
5.	ಚಿತ್ರದುರ್ಗ	104
6.	ಶಿವಮೊಗ್ಗ	180
7.	ದಾವಣಗೆರೆ	102
8.	ಮೈಸೂರು	231
9.	ಚಾಮರಾಜನಗರ	121
10.	ಮಂಡ್ಯ	141
11.	ಹಾಸನ	169

12.	ಚಿಕ್ಕಮಗಳೂರು	144
13.	ದಕ್ಷಿಣ ಕನ್ನಡ	176
14.	ಉಡುಪಿ	125
15.	ಕೊಡಗು	187
16.	ಬೆಳಗಾಂ	108
17.	ಧಾರವಾಡ	115
18.	ಗದಗ	104
19.	ಹಾವೇರಿ	140
20.	ಕಾರವಾರ	109
21.	ಬಿಜಾಪುರ	105
22.	ಬಾಗಲಕೋಟೆ	350
23.	ಗುಲ್ಬರ್ಗಾ	110
24.	ಬೀದರ್	112
25.	ರಾಯಚೂರು	120
26.	ಬಳ್ಳಾರಿ	117
27.	ಕೊಪ್ಪಳ	131
	ಒಟ್ಟು	4043

ದ. ಕನ್ನಡ ಜಿಲ್ಲೆಯಲ್ಲಿ ಕಿಂಡಿ ಅಣೆಕಟ್ಟೆ ನಿರ್ಮಾಣ

640(985) ಶ್ರೀ ಸದಾನಂದ ಗೌಡ ಡಿ.ಎ. (ಪುತ್ತೂರು) ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರ್‌ಜಲ ಮಟ್ಟ ಕುಸಿದಿದ್ದು, ಕಿಂಡಿ ಅಣ್ಣೆಕಟ್ಟೆಗಳ ಮುಖಾಂತರ ಅಂತರ್ಜಲ ಏರಿಸಬಹುದಾಗಿದ್ದು, ಹೆಚ್ಚು ಕಿಂಡಿ ಅಣ್ಣೆಕಟ್ಟೆ ರಚಿಸುವ ಇರಾದೆ ಸರ್ಕಾರಕ್ಕೆ ಇದೆಯೇ;

ಆ) ಇದ್ದಲ್ಲಿ ಯೋಜನೆಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಇದೆ.